CW.1 PW.1

### ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ

# CC No.1066/2024

| | |
|---|---|
| ಸಾಕ್ಷಿದಾರರ ಹೆಸರು | ರತ್ನಮ್ಮ |
| ಗಂಡನ ಹೆಸರು | ನಾಗರಾಜು |
| ವಯಸ್ಸು | 46 ವರ್ಷ |
| ವೃತ್ತಿ | ಕೂಲಿ |
| ವಿಳಾಸ | ಬೆಂಗಳೂರು |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 21.11.2025 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿತರ ಪರಿಚಯವಿರುತ್ತದೆ. ಅವರು ಎಲ್ಲಾ ನನ್ನ ಸಂಬಂಧಿಕರು. ಚಾಸಾ-2 ರಿಂದ ಚಾಸಾ-5 ರವರ ಪರಿಚಯವಿದೆ.

ಹೋದ ವರ್ಷ ನನಗೆ ದಿನಾಂಕ ನೆನಪಿಲ್ಲ ಮರಿಚೂಡಯ್ಯ ಎಂದರೆ ನನ್ನ ಗಂಡನ ತಂದೆ ತೀರಿಕೊಂಡಿರುತ್ತಾರೆ. ಶವಸಂಸ್ಕಾರ ಆದ ನಂತರ ತಿಥಿ ಕಾರ್ಯ ಮಾಡುವ ಸಂಬಂಧ 1 ರಿಂದ ನೇ ಆರೋಪಿತರು ಹಾಗೂ ನಾವುಗಳು ಮಾತನಾಡುತ್ತಿದ್ದ ಸಂದರ್ಭದಲ್ಲಿ ದುಡ್ಡಿನ ವಿಚಾರವಾಗಿ ಜಗಳ ಶುರುವಾಗಿರುತ್ತದೆ. ಆಗ ನಮ್ಮ ಬಳಿ ಇರಲು ಮನೆ ಇಲ್ಲ, ಹಣ ಕೊಡುತ್ತೇವೆ ಎರಡು ದಿನದ ಮುಂಚೆ ಬಂದು ಕಾರ್ಯಕ್ಕೆ ಸಿದ್ದತೆ ಮಾಡುತ್ತೇವೆಂದು ಹೇಳಿದೆವು. ಆ ಸಂದರ್ಭದಲ್ಲಿ 1 ರಿಂದ 3ನೇ ಆರೋಪಿತರು ನನ್ನ ಮೇಲೆ ಕೆಟ್ಟದಾಗಿ ಮಾತನಾಡಿರುತ್ತಾರೆ. ನಂತರ 1 ರಿಂದ 3ನೇ ಆರೋಪಿತರು ನನ್ನನ್ನು ಹೊಡೆಯಲು ಶುರು ಮಾಡಿದರು. ದೊಣ್ಣೆಯಿಂದ ನನ್ನನ್ನು ತುಂಬಾ ಹೊಡೆದಿರುತ್ತಾರೆ. ನಂತರ 1 ರಿಂದ 4ನೇ

ಆರೋಪಿತರು ನನ್ನ ಜುಟ್ಟನ್ನು ಹಿಡಿದು ಎಳೆದಾಡಿ ಹೊಡೆದಿರುತ್ತಾರೆ. ಅವರ ಜೊತೆ 5 ರಿಂದ 9 ನೇ ಆರೋಪಿತರು ಸೇರಿಕೊಂಡು ಹೊಡೆದಿರುತ್ತಾರೆ. ಅಲ್ಲಿಂದ ತಪ್ಪಿ ಸಿಕೊಂಡು ನಾನು ಹೊರಗೆ ಬರಲು ಬಿಡಿಸಿಕೊಳ್ಳಲು ಬಂದಿದ್ದರು ಆದರೆ ನನಗೆ ಹೆಸರು ನೆನಪಿಲ್ಲ. ನಂತರ ಈ ಸಂಬಂಧ ನಾನು ದೂರನು ಕೊಟ್ಟಿರುತ್ತೇನೆ.

ದೂರು ಕೊಟ್ಟ ನಂತರ ನನ್ನನ್ನು ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಆದಾದ ಮೇಲೆ ಪೋಲೀಸರು ಮಹಜರ್ ಗೆ ಕರೆದುಕೊಂಡು ಹೋಗಿರುತ್ತಾರೆ. 3 ಗಂಟೆಯಿಂದ 4-4.30 ಗಂಟೆಯವರೆಗೂ ಮಹಜರ್ ಮಾಡಿರುತ್ತಾರೆ. ನನ್ನ ಜೊತೆ ಯಾರು ಮಹಜರ್ ಗೆ ಹಾಜರಿದ್ದರು ಎಂದು ಹೆಸರುಗಳು ಗೊತ್ತಾಗುತ್ತಿಲ್ಲ. ಸ್ಥಳದಲ್ಲಿ ದೊಣ್ಣೆಯನ್ನು ಅಮಾನತು ಪಡಿಸಿಕೊಂಡಿರುತ್ತಾರೆ. ನಾನು ಪೋಲೀಸರಿಗೆ ನಂತರದಲ್ಲಿ ಯಾವುದೇ ಹೇಳಿಕೆ ಕೊಟ್ಟಿಲ್ಲ.

**ಈ ಹಂತದಲ್ಲಿ ಮುದ್ದೆಮಾಲುಗಳನ್ನು ಹಾಜರು ಪಡಿಸುವ ಸಲುವಾಗಿ ಸ.ಸ ಅ ರವರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ನೀಡಲಾಯಿತು.**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**